# ಬಲಪಂಥೀಯ ಪಠ್ಯಪುಸ್ತಕದ ಪುನರಾಗಮನ

ಅಪೂರ್ವಾನಂದ್ (೨೦೦೭, ಜನವರಿ ೨೦)

ರಾಜಾಸ್ಥಾನದ ಒಂದು ಹೊಸ ಪುಸ್ತಕ, ಭಾರತೀಯತೆಯನ್ನು ಹಿಂದೂ ಅಸ್ಮಿತೆಯೊಂದಿಗೆ ಸಮೀಕರಿಸಿ, ಮುಸ್ಲಿಂ ಮತ್ತು ಇತರೆ ಸಮುದಾಯಗಳನ್ನು ಅಲ್ಲಗಳೆದಿದೆ. ಯಾರಾದರೂ ಕೇಳಿಸಿಕೊಳ್ಳುತ್ತಿದ್ದಾರೆಯೇ?

ಅಪೂರ್ವಾನಂದ್

ಪಠ್ಯಪುಸ್ತಕಗಳು ಮತ್ತೆ ಸುದ್ದಿಯಲ್ಲಿವೆ. ಈ ಬಾರಿಯ ಸರದಿ, ಅಜ್ಮೇರಿನ ರಾಜಾಸ್ಥಾನ ಮಾಧ್ಯಮಿಕ ಶಿಕ್ಷಣ ಮಂಡಳಿಯವರು ಹತ್ತನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಸಿದ್ಧಪಡಿಸಿರುವ ಸಮಾಜವಿಜ್ಞಾನ ಪುಸ್ತಕದ್ದು. ೨೦೦೫ರಲ್ಲಿ ಎನ್ ಸಿ ಇ ಆರ್ ಟಿ ಯವರು ಶಾಲಾ ಶಿಕ್ಷಣಕ್ಕಾಗಿ ರೂಪಿಸಿದ ಹೊಸ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ತಿರಸ್ಕರಿಸುವ ರಾಜಾಸ್ಥಾನ ಸರ್ಕಾರದ ನಿರ್ಣಯದ ಪರಿಣಾಮದಿಂದ ಹೊರಬಂದಿರುವ ಪುಸ್ತಕವಿದು ಎಂಬುದು ನೆನಪಿಡಬೇಕಾದ ಅಂಶ. ಬಿಜೆಪಿ ಆಡಳಿತವನ್ನು ಹೊಂದಿರುವ ಎಲ್ಲಾ ರಾಜ್ಯಗಳು, ಎನ್ ಸಿ ಇ ಆರ್ ಟಿ ಯಿಂದ ಸಿದ್ಧಪಡಿಸಲಾದ ಪಠ್ಯಪುಸ್ತಕಗಳು ಪೂರ್ವಾಗ್ರಹಪೀಡಿತವಾಗಿವೆ ಎಂದು ನಿರ್ಧರಿಸಿ, ತಾವೇ ಸ್ವತಃ ಪಠ್ಯಪುಸ್ತಕಗಳನ್ನು ತಯಾರಿಸುತ್ತೇವೆಂದು ಘೋಷಿಸಿವೆ. ಈ ಹಿನ್ನೆಲೆಯಲ್ಲಿ, ಎನ್ ಸಿ ಇ ಆರ್ ಟಿ ಪುಸ್ತಕಗಳಲ್ಲಿನ ಪೂರ್ವಾಗ್ರಹದ ವಿರುದ್ಧ ತಮ್ಮ ಉದ್ದೇಶಿತ ತಂಡಗಳು ತಯಾರಿಸಿದ ಪುಸ್ತಕಗಳೊಂದಿಗೆ ಈ ರಾಜ್ಯಗಳು ಹೇಗೆ ಹೋರಾಡುತ್ತವೆ? ಎಂಬುದನ್ನು ತಿಳಿಯುವುದು ಬಹಳ ಆಸಕ್ತಿಕರವಾದ ವಿಷಯ.

ರಾಜಾಸ್ಥಾನದ ಸಮಾಜವಿಜ್ಞಾನ ತಜ್ಞರು ಇದನ್ನು ಈ ರೀತಿ ನಿರ್ವಹಿಸಿದ್ದಾರೆ: ಪುಸ್ತಕದ ಮೊದಲನೆಯ ಅಧ್ಯಾಯವು ವಿದ್ಯಾರ್ಥಿಗಳಿಗೆ ಭಾರತೀಯ ಸಂಸ್ಕೃತಿಯ ಮೂಲ ತತ್ವಗಳನ್ನು ಪರಿಚಯಿಸುವ ಉದ್ದೇಶವನ್ನು ಹೊಂದಿದೆ. ನಮ್ಮ ಸಂಸ್ಕೃತಿಯನ್ನು ಆರ್ಯ ಸಂಸ್ಕೃತಿ, ಭಾರತೀಯ ಸಂಸ್ಕೃತಿ ಮತ್ತು ಹಿಂದೂ ಸಂಸ್ಕೃತಿ ಎಂದು ಕರೆಯಲಾಗಿದೆ. ಓದುಗರ ಮನಸ್ಸಿನಲ್ಲಿ ಯಾವುದೇ ರೀತಿಯ ಗೊಂದಲವಿಲ್ಲದಿರಲು ಪುಸ್ತಕವು ಅದನ್ನು ಹೀಗೆ ವಿವರಿಸುತ್ತದೆ: "ವಾಸ್ತವದಲ್ಲಿ ಈ ಮೂರೂ ನಾಮಧೇಯಗಳು ಸಮಾನಾರ್ಥಕ ಪದಗಳು". ಹಾಗಾದರೆ, ಆರ್ಯರಲ್ಲದವರು ಏನಾದರು? ಆದಿವಾಸಿಗಳು, ದಲಿತರು ಎಲ್ಲಿಗೆ ಹೋದರು? ಈ ಪುಸ್ತಕವು ಅವರನ್ನು ಮರೆತಿಲ್ಲ. ಆದಿವಾಸಿಗಳನ್ನು ವನ್ಯ ಜಾತಿಗಳು ಎಂದು ಕರೆಯಲಾಗಿದ್ದು, ಒಂದೊಮ್ಮೆ ಸ್ವತಃ ಶ್ರೀರಾಮಚಂದ್ರನಿಂದಲೇ ಇವರು ಸಂಘಟಿತರಾಗಿ ಸುಧಾರಣೆಗೊಳಗಾದರು ಎನ್ನಲಾಗಿದೆ. ಪುಸ್ತಕದಲ್ಲಿ ಮತ್ತೊಂದೆಡೆ ಶ್ರೀ ಬಾಬಾ ರಾಮದೇವ್ (ರಾಜಾಸ್ಥಾನದ ಜನಸಾಮಾನ್ಯರ ಗುರು) ಇವರಲ್ಲಿ ಒಳ್ಳೆಯ ಹವ್ಯಾಸಗಳನ್ನು ರೂಢಿಸುವುದನ್ನು ನೀವು ಕಾಣುತ್ತೀರಿ. ಇವರು ಮೂಲತಃ ಹಿಂದುಳಿದವರು ಮತ್ತು ಹಲವಾರು ಕೆಟ್ಟ ಹವ್ಯಾಸಗಳ ಭಂಡಾರವಾಗಿದ್ದು, ಈ ಪೀಡನೆಗಳಿಂದ ಮುಕ್ತಿ ಹೊಂದಲು ಇವರಿಗೆ ಒಬ್ಬ ರಾಮಚಂದ್ರ ಅಥವಾ ಬಾಬಾ ರಾಮದೇವರ ಅಗತ್ಯವಿದೆ ಎಂಬುದು ಇಲ್ಲಿನ ಗ್ರಹಿಕೆ. ನಮಗೆ ತಿಳಿದಿರುವಂತೆ, ಆರ್ಯ ಮತ್ತು ಹಿಂದೂ ಸಂಸ್ಕೃತಿ ಎರಡೂ ಆಗಿರುವ ಭಾರತೀಯ ಸಂಸ್ಕೃತಿಯ ಶ್ರೇಷ್ಠತೆಗಳ ಸವಿಸ್ತಾರ ಗುಣಗಾನದ ನಂತರ ವಿಧಾರ್ಥಿಗಳಿಗೆ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರ ನೀಡಲು ಕೇಳಲಾಗುತ್ತದೆ:

ಯಾವುದಾದರೂ ಒಂದನ್ನು ಆರಿಸಿ.

> ಮಾನವ ಜೀವನದ ಪರಮೋಚ್ಚ ಗುರಿಯೆಂದರೆ:

(೧) ಧರ್ಮ (೨) ಅರ್ಥ (೩) ಮೋಕ್ಷ (೪) ಕಾಮ

> ನಾಲ್ಕು ಆಶ್ರಮಗಳ ಹೆಸರನ್ನು ಬರೆಯಿರಿ.

> ವಿಷ್ಣು ಪುರಾಣವನ್ನು ಆಧರಿಸಿ 'ಭಾರತ' ಮತ್ತು 'ಭಾರತೀಯ' - ಇವುಗಳನ್ನು ವ್ಯಾಖ್ಯಾನಿಸಿ.

ಭಾರತವು ಇತರೆ ದೇಶಗಳಿಗಿಂತ ಶ್ರೇಷ್ಠವಾದುದು, ಏಕೆಂದರೆ, ಇತರೆಡೆಗಳಲ್ಲಿ ಎರಡು-ಮೂರು ಋತುಗಳಿದ್ದರೆ, ಭಾರತದಲ್ಲಿ ಮಾತ್ರ ಆರು ಋತುಗಳಿವೆ. ಭಾರತವು ಮಹಾನ್ ದೇಶ, ಏಕೆಂದರೆ, ಖಗೋಳ ವಿಜ್ಞಾನ, ಗಣಿತಶಾಸ್ತ್ರ, ವೈದ್ಯಶಾಸ್ತ್ರ, ಶಸ್ತ್ರಚಿಕಿತ್ಸೆ ಮತ್ತು ಸುರೂಪ ಚಿಕಿತ್ಸೆಯೂ (ಪ್ಲಾಸ್ಟಿಕ್ ಸರ್ಜರಿ) ಸಹಾ ಭಾರತದಲ್ಲಿಯೇ ಹುಟ್ಟಿದ್ದು ಎಂಬುದರಲ್ಲಿ ಯಾವುದೇ ಅನುಮಾನವಿರಲು ಸಾಧ್ಯವೇ? (ಗಣೇಶನಿಗೆ ಆನೆಯ ತಲೆಯನ್ನು ಕಸಿ ಮಾಡಿದ ಪ್ರಸಿದ್ಧ ಸಂಗತಿ ನಿಮಗೆ ನೆನಪಿದೆಯಲ್ಲವೇ?). ಜೀವಶಾಸ್ತ್ರ, ಲೋಹಶಾಸ್ತ್ರ ಹೀಗೆ ಯಾವುದೇ ವಿಜ್ಞಾನ ಅಥವಾ ಜ್ಞಾನದ ಶಾಖೆಯಾಗಿರಲಿ, ಬೇರೆ ಯಾವುದೇ ದೇಶ ಅಥವಾ ಸಂಸ್ಕೃತಿಗೆ ಮುಂಚೆಯೇ ನಾವು ಇದೆಲ್ಲವನ್ನೂ ಹೊಂದಿದ್ದು, ಅದೇ ನಮ್ಮ ದೇಶ ಮತ್ತು ಸಂಸ್ಕೃತಿಯನ್ನು ಮಹೋನ್ನತವಾಗಿಸಿದೆ. ಎಲ್ಲವೂ ಈಗಾಗಲೇ ಇಲ್ಲಿರುವಾಗ, ಕಾರ್ಮಿಕ ಸಂಘಟನೆಯ ಬಗ್ಗೆ ನಾವು ಪಾಶ್ಯಾತ್ಯರಿಂದ ಕಲಿತೆವು ಎಂದು ಹೇಗಾಗುತ್ತದೆ? ಕಾರ್ಮಿಕರಿಗೆ ವಿಶ್ವಕರ್ಮರಲ್ಲಿ ಪೂಜ್ಯ ಭಾವವಿದ್ದು, ಶೋಷಣೆಯನ್ನು ಯಾವಾಗಲೂ ಸಂಘಟನೆಯೊಂದಿಗೆ ಎದುರಿಸಲಾಗುತಿತ್ತು ಎಂಬುದನ್ನು ಪುಸ್ತಕವು ಓದುಗರಿಗೆ ತಿಳಿಸುತ್ತದೆ.

'ಭಾರತೀಯತೆಯು ನಿಜವಾಗಿ ಏನನ್ನು ಒಳಗೊಂಡಿದೆ ಎಂಬುದರ ಬಗ್ಗೆ ಪುಸ್ತಕವು ಈ "ಉದ್ದೇಶಿತ" ದೃಷ್ಟಿಕೋನವನ್ನು ಹೊಂದಿರುವುದರಿಂದ, ಎಲ್ಲಾ ಅಧ್ಯಾಯಗಳಲ್ಲಿಯೂ ಅದು ವಿದ್ಯಾರ್ಥಿಗಳಿಗೆ ಹಿಂದೂ ದರ್ಮವನ್ನು ಕುರಿತಂತೆ ಮಿತಿಮೀರಿದ ಪ್ರಮಾಣದಲ್ಲಿ ಜ್ಞಾನವನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ. ಪುಸ್ತಕದ ಮುಕ್ಕಾಲು ಭಾಗವು ಹಿಂದೂ ದೇವರುಗಳು ಮತ್ತು ದೇವತೆಗಳು, ಧಾರ್ಮಿಕ ಹಬ್ಬಗಳು ಮತ್ತು ತೀರ್ಥಕ್ಷೇತ್ರಗಳ ವಿವರಗಳಿಂದ ತುಂಬಿದೆ. ನೀವೇನಾದರೂ ಹೇಗೆ ಮತ್ತು ಏಕೆ ಇದನ್ನು ಸಮಾಜವಿಜ್ಞಾನ ಪುಸ್ತಕವೆಂದು ಕರೆಯಬೇಕು ಎಂದೇನಾದರೂ ಪ್ರಶ್ನಿಸಿದರೆ, ನಿಮಗೆ 'ಭಾರತ-ವಿರೋಧಿ' ಎಂಬ ಹಣೆಪಟ್ಟಿ ಕಟ್ಟಲಾಗುತ್ತದೆ.

ಈ ಪುಸ್ತಕದ ಬರಹಗಾರರು ಭಾರತದ ಶತ್ರುಗಳ ಬಗ್ಗೆ ಯಾವುದೇ ಅಸ್ಪಷ್ಟತೆಯನ್ನು ಹೊಂದಿಲ್ಲ. ಒಂದಕ್ಕಿಂತ ಹೆಚ್ಚು ಸನ್ನಿವೇಶಗಳಲ್ಲಿ ಅವರನ್ನು 'ವಿಶೇಷ ಸಮುದಾಯ'ವೆಂದು ಗುರುತಿಸಲಾಗಿದ್ದು, ರಾಜಸ್ಥಾನದ ಗಡಿಪ್ರದೇಶದಲ್ಲಿ ವಾಸಿಸುವ ಈ ಸಮುದಾಯದವರು ಭಾರತ ಮತ್ತು ಪಾಕಿಸ್ಥಾನ - ಎರಡರಿಂದಲೂ ಓಲೈಕೆಗೆ ಒಳಪಟ್ಟು, ಹೋಗಿ (ಎಲ್ಲಿಗೆ?) ಬಂದು ಮಾಡುತ್ತಿರುತ್ತಾರೆ. ಈ ವಿಶೇಷ ಸಮುದಾಯವು ಗಡಿ ಭಾಗದಲ್ಲಿ ಒಳನುಸುಳುವಿಕೆಯನ್ನು ಪ್ರೋತ್ಸಾಹಿಸುತ್ತಿದೆಯಲ್ಲದೆ, ಅಕ್ರಮವಾಗಿ ಜಾನುವಾರು ಮತ್ತು ಅಪ್ರಾಪ್ತ ಬಾಲಕಿಯರ ಸಾಗಾಣಿಕೆಯೂ ನಡೆಯುತ್ತಿದ್ದು, ರಾಜೀವ್ ಗಾಂಧಿಯವರಿಗೆ ಸೀಮಾ ಜನ ಕಲ್ಯಾಣ ಸಮಿತಿಯು (ಎಸ್.ಜೆ.ಎಸ್), ಅಕ್ರಮವಾಗಿ ಒಳನುಸುಳಿದವರಿಗೆ ಜಮೀನನ್ನು ನೀಡಲಾಗಿರುವ ಬಗ್ಗೆ ತಿಳಿಸಿದ ನಂತರ ಅದನ್ನು ರದ್ದುಗೊಳಿಸಲಾಯಿತು. ಕಾಕತಾಳೀಯವಾಗಿ ಈ ಸೀಮಾ ಜನ ಕಲ್ಯಾಣ ಸಮಿತಿಯು ಆರ್ ಎಸ್ ಎಸ್ ನ ತಂಡಗಳಲ್ಲಿ ಒಂದಾಗಿದೆ. ಅಂತರರಾಷ್ಟ್ರೀಯ ಗಡಿಗಳಲ್ಲಿ ವಾಸಿಸುವ ಜನರು ಬಡವರು, ಅನಕ್ಷರಸ್ಥರು ಹಾಗೂ ತಮ್ಮ ಧಾರ್ಮಿಕ ಶ್ರದ್ಧೆಯ ಕಾರಣದಿಂದಾಗಿ ಮೂಢನಂಬಿಕೆಗಳನ್ನು ಹೊಂದಿದವರಾಗಿರುತ್ತಾರೆಂದು ಓದುಗರಿಗೆ ತಿಳಿಸಲಾಗಿದೆ. ಆದರೆ, ಹಿಂದೂ ಧದರ್ಮವು ಬಹಳ ವೈಜ್ಞಾನಿಕವಾಗಿದ್ದು, ಎಂದಿಗೂ ಅಂಧ ವಿಶ್ವಾಸದಿಂದಿರಲು ಸಾಧ್ಯವಿಲ್ಲ. ಹಾಗಿದ್ದಲ್ಲಿ, ಈ ವಿಶೇಷ ಸಮುದಾಯವನ್ನು ಯಾರು ರೂಪಿಸಿದ್ದಾರೆಂದು ಊಹಿಸಲು ಕಷ್ಟವೇ? ಮಂಡಳಿಯ ಅಧ್ಯಕ್ಷರಿಗೆ ಪತ್ರಕರ್ತರೊಬ್ಬರು; ಈ ವಿವರಣೆಯಿಂದ

ಮುಸ್ಲಿಮರು ಅಸಮಾಧಾನಗೊಂಡಿದ್ದಾರೆ ಎಂದಾಗ, ಅವರು, ಪುಸ್ತಕದಲ್ಲಿ ಎಲ್ಲಿಯೂ ಅವರನ್ನು ಹೆಸರಿಸಲಾಗಿಲ್ಲ; ಆದಾಗ್ಯೂ, ಅವರೇನಾದರೂ ಅಸಮಾಧಾನಗೊಂಡಿದ್ದಾರೆ ಎಂದರೆ, ಹಿಂದಿಯಲ್ಲಿನ "ಕಳ್ಳನ ಗಡ್ಡದಲ್ಲಿ ಹುಲ್ಲಿನ ಎಸಳು" ಎಂಬ ಗಾದೆಯಂತಾಗುತ್ತದೆ ಎಂದು ಉತ್ತರಿಸಿದರು.

ಈ ಪುಸ್ತಕವು ಸಂವಿಧಾನದ ಮೂಲ ತತ್ವಗಳನ್ನು ಉಲ್ಲಂಘಿಸುತ್ತದೆ ಮತ್ತು ಇದನ್ನು ಶಾಲಾ ಜ್ಞಾನವೆಂಬ ನಿಟ್ಟಿನಲ್ಲಿ ರಾಜಾಸ್ಥಾನದ ಅಸಹಾಯಕ ಮಕ್ಕಳ ಮೇಲೆ ಹೇರುವುದಕ್ಕೆ ಅವಕಾಶ ನೀಡಬಾರದು. ಪಠ್ಯಪುಸ್ತಕಗಳ ಮೇಲಿನ ಚರ್ಚೆಗಳನ್ನು ನಗಣ್ಯಗೊಳಿಸುತ್ತಿರುವ ನಮ್ಮಲ್ಲಿನ ಕೆಲವರು ಈ ಬಗ್ಗೆ ನಿಷ್ಠುರವಾಗಿ ಗಮನವನ್ನು ಹರಿಸಬೇಕಿದೆ.

ಈ ಸಮುದಾಯದ ಜನಸಂಖ್ಯೆಯ ಬೆಳವಣಿಗೆಯನ್ನು ನಿಕಟವಾಗಿ ಗಮನಿಸಬೇಕಲ್ಲದೆ, ಮತಾಂತರವನ್ನು ಮತ್ತು ಈ ಸಮುದಾಯದವರ ಓಲೈಕೆಯನ್ನು ನಿಲ್ಲಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದಾಗಿಯೂ ಈ ಪುಸ್ತಕವು ಸಲಹೆ ನೀಡುತ್ತದೆ.

ಭಯೋತ್ಪಾದನೆಯ ಸಮಸ್ಯೆಯನ್ನು ಪುಸ್ತಕದಲ್ಲಿ ಸುದೀರ್ಘವಾಗಿ ಚರ್ಚಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ನೂರಕ್ಕೂ ಹೆಚ್ಚು ಭಯೋತ್ಪಾದಕ ಸಂಘಟನೆಗಳಿವೆ ಎಂದು ಅದು ತಿಳಿಸುಳುತ್ತದೆ (ಮಾಹಿತಿಯ ಮೂಲವನ್ನು ಕೇಳಬೇಡಿ, ಇದು ಹೆಚ್ಚಾಗಿ ನಂಬಿಕೆಗೆ ಸಂಬಂಧಪಟ್ಟಿದೆ). ಜಮ್ಮು ಮತ್ತು ಕಾಶ್ಮೀರದ ಸರಕಾರವು ಭಯೋತ್ಪಾದಕರಿಂದ ಒತ್ತಡಕ್ಕೊಳಗಾಗಿ ಕೆಲಸ ಮಾಡುತ್ತದೆ ಹಾಗೂ ಕೆಲವು ನಾಯಕರೂ ಸಹಾ ಅವರೊಂದಿಗೆ ಸೇರಿರುವುದರಿಂದಲೇ ಪುನರ್ವಸತಿ ಕಾಯ್ದೆಯನ್ನು ಜಾರಿಗೊಳಿಸಿ, ('ಕಾಯ್ದೆ' ಎಂದರೆ ಖಚಿತವಾಗಿ ಏನು ಎಂದು ಮಾತ್ರ ಕೇಳಬೇಡಿ) ಸಂವಿಧಾನದ ೩೭೦ನೇ ಕಲಂನ ರೂಪದಲ್ಲಿ ತಾತ್ಕಾಲಿಕ ಅವಕಾಶವನ್ನು ನೀಡಲಾಗಿದ್ದು, ಓಲೈಸುವಿಕೆಯ ನೀತಿಯಡಿಯಲ್ಲಿ ಅದನ್ನು ಜೀವಂತವಾಗಿರಿಸಲಾಗಿದೆ ಎಂಬುದನ್ನು ಯಾವುದೇ ಅಳುಕಿಲ್ಲದಂತೆ ಸಮರ್ಥಿಸಲಾಗಿದೆ. ಕಾಶ್ಮೀರ ಕಣಿವೆ, ಜಮ್ಮು ಮತ್ತು ಲಡಾಖ್‌ಗಳಿಗೆ ನೀಡಲಾಗಿರುವ ಲೋಕಸಭೆ ಹಾಗೂ ವಿಧಾನಸಭೆಯ ಸ್ಥಾನಗಳಲ್ಲಿ ಅಸಮತೋಲನವಿದೆ ಎಂದೂ ಪುಸ್ತಕವು ತಿಳಿಸುತ್ತದೆ.

ಭಯೋತ್ಪಾದನೆಯನ್ನು ನಿಷೇಧಿಸಲು ಪುಸ್ತಕವು ಒಂದು ಮದ್ದನ್ನು ಸೂಚಿಸುತ್ತದೆ. ಧಾರ್ಮಿಕ ಮತಾಂತರ ಮತ್ತು ಒಳನುಸುಳುವಿಕೆ, ಎಲ್ಲಾ ರೀತಿಯ ಓಲೈಕೆಗಳು ಮತ್ತು ರಾಜಕೀಯ ಪಟ್ಟಭದ್ರ ಹಿತಾಸಕ್ತಿಗಳನ್ನು (ಇದರರ್ಥ ಏನಾದರೂ ಆಗಿರಬಹುದು) ತಡೆಗಟ್ಟಲು ಕಠಿಣವಾದ ಕಾನೂನಗಳನ್ನು ರೂಪಿಸುವಂತೆ ತಿಳಿಸಲಾಗಿದೆ. ಇತರೆ ಕ್ರಮಗಳ ಜೊತೆಗೆ, ಯುನೈಟೆಡ್ ಲಿಬರೇಶನ್ ಫ್ರಂಟ್ ಆಫ್ ಅಸ್ಸಾಂ (ಉಲ್ಫಾ) ಮುಂತಾದ ಸಂಘಟನೆಗಳ ನೆಲೆಗಳನ್ನು ನಾಶಪಡಿಸಲು ಮತ್ತು ಅತಿಕ್ರಮಣಕಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆಯಲು ಅದು ಕರೆ ನೀಡುತ್ತದೆ.

೩೭೦ನೇ ಕಲಂ ಅನ್ನು ಕೂಡಲೇ ರದ್ದುಪಡಿಸುಂತೆ ಕೋರಿದ ನಂತರ, ಭಯೋತ್ಪಾದನೆಯನ್ನು ಸಂಪೂರ್ಣವಾಗಿ ಕೊನೆಗೊಳಿಸಲು ಸೈನ್ಯಕ್ಕೆ ಪೂರ್ಣ ಸ್ವಾತಂತ್ರ್ಯವನ್ನು ನೀಡುವಂತೆ ಒತ್ತಾಯಿಸಲಾಗಿದೆ. ನೀವು ೧೯೫೮ರ ಸೈನ್ಯದ ವಿಶೇಷ ಅಧಿಕಾರ ಕಾಯ್ದೆ ಹಾಗೂ ಕಾನೂನು ವಿರೋಧಿ ಚಟುವಟಿಕೆಗಳ ತಡೆ ಕಾಯ್ದೆಯನ್ನು ರದ್ದುಗೊಳಿಸಲು ಹೋರಾಡುತ್ತಿರುವ ಜನರಿದ್ದಾರೆ ಎಂದು ತಿಳಿದಿದ್ದೀರಿ. ಜಮ್ಮು ಮತ್ತು ಲಡಾಖ್ ಪ್ರದೇಶಗಳ ವಿರುದ್ಧ ತಾರತಮ್ಯವನ್ನು ಕೊನೆಗಾಣಿಸುವಂತೆ ಕರೆ ನೀಡಿ, ಪಾಕಿಸ್ತಾನದೊಂದಿಗೆ ನಾವು ಅಧಿಕಾರಯುತ ಭಾಷೆಯಲ್ಲಿ ಸಂವಾದವನ್ನು ನಡೆಸಬೇಕೆಂದು ಈ ಪುಸ್ತಕವು ಸಲಹೆ ನೀಡುತ್ತದ.

ರಾಜಕೀಯ ತತ್ವಗಳ ಬಗ್ಗೆ ಚರ್ಚಿಸುವಾಗ; ಪ್ರತಿಗಾಮಿತ್ವವು ಪ್ರಜಾಪ್ರಭುತ್ವದಲ್ಲಿನ ಕೊರತೆಗಳನ್ನು ನಿವಾರಿಸುತ್ತದೆ, ದೇಶಭಕ್ತಿಯನ್ನು ಹರಡುತ್ತದೆ ಮತ್ತು ಪ್ರಬಲ ಇಚ್ಛಾಶಕ್ತಿಯಿರುವ ನಾಯಕನು ಯಾವುದೇ

ಹಿಂಜರಿಕೆಯಿಲ್ಲದೆ ಕೂಡಲೇ ದೃಢ ನಿರ್ಧಾರವನ್ನು ತೆಗೆದುಕೊಳ್ಳಲು ಅವಕಾಶ ನೀಡುತ್ತದೆ ಎಂಬ ಕಾರಣಗಳಿಂದಾಗಿ, ಅದನ್ನು ಬಹಳ ಪ್ರಮುಖವಾದುದೆಂದು ಹೇಳಲಾಗುತ್ತದೆ.

ಯಾರೋ ಒಬ್ಬರು ಈ ಪುಸ್ತಕವು ಆರ್ ಎಸ್ ಎಸ್ ಕರಪತ್ರದ ಕಚ್ಚಾ ಪ್ರತಿಯಾಗಿದ್ದು, ಇದನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿಲ್ಲ ಎಂದು ಹೇಳಿದರು. ನೀರಸ ಭಾಷೆಯಿಂದ ಕೂಡಿದ್ದು, ಬಹುತೇಕ ಎಲ್ಲಾ ಪುಟಗಳಲ್ಲಿ ದೋಷಗಳಿಂದ ತುಂಬಿರುವ ಈ ಪುಸ್ತಕವನ್ನು ನಾವು ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ. ಏಕೆಂದರೆ, ರಾಜ್ಯದ ವತಿಯಿಂದ ಪ್ರಾಯೋಜಿಸಲಾದ ಈ ಪಠ್ಯಪುಸ್ತಕದ ಹೊರತಾಗಿ, ಇತರೆ ಯಾವುದೇ ಜ್ಞಾನ ಸಂಪನ್ಮೂಲಗಳಿಲ್ಲದ ರಾಜಾಸ್ಥಾನದ ಲಕ್ಷಾಂತರ ಮಕ್ಕಳಿಗೆ ಇದನ್ನು ಅಧಿಕೃತ ಮತ್ತು ಅಂತಿಮ ಜ್ಞಾನವಾಗಿ ಒದಗಿಸಲಾಗುತ್ತದೆ. ಆದಿವಾಸಿಗಳು ಹಾಗೂ ದಲಿತರನ್ನು ಕಡೆಗಣಿಸಿ, ಜಮ್ಮು ಮತ್ತು ಕಾಶ್ಮೀರದ ಸರ್ಕಾರ ಹಾಗೂ ಮುಸ್ಲಿಮರ ಬಗ್ಗೆ ಆರೋಪವನ್ನು ಹೊರಿಸಿ, ಬಹಳ ಆಕ್ರಮಣಕಾರಿಯಾಗಿ ಇದನ್ನು ಬರೆಯಲಾಗಿದೆ. ಇದು ಸೈನಿಕವಾದಿ ದೃಷ್ಟಿಕೋನವನ್ನು ಹೊಂದಿದ್ದು, ಹಿಂದೂ ಮೇಲ್ಜಾತಿಯ ಪುರುಷಪ್ರಧಾನ ರಾಷ್ಟ್ರೀಯತೆಯ ಯೋಜನೆಯನ್ನು ಕಾರ್ಯರೂಪಕ್ಕೆ ತರುವಂತಹ ಉದ್ದೇಶವನ್ನು ಹೊಂದಿದೆ. ಇದು ಸಂವಿಧಾನದ ಮೂಲಭೂತ ತತ್ವಗಳನ್ನು ಉಲ್ಲಂಘಿಸುತ್ತದೆಯಾದ್ದರಿಂದ, ಗೌರವಾನ್ವಿತ ಶಾಲಾ ಜ್ಞಾನವಾಗಿ ಇದನ್ನು ರಾಜಾಸ್ಥಾನದ ಅಸಹಾಯಕ ಶಾಲಾ ಮಕ್ಕಳ ಮೇಲೆ ಹೇರಲು ಅವಕಾಶ ನೀಡಲು ಸಾಧ್ಯವಿಲ್ಲ. ಎಲ್ಲಾ ಸರಕಾರಗಳೂ ತಮ್ಮ ತತ್ವಗಳನ್ನು ಪಠ್ಯಪುಸ್ತಕಗಳ ಮುಖೇನ ಪ್ರಸಾರಮಾಡುತ್ತವೆ ಎಂದು ಹೇಳುತ್ತಾ, ಶಾಲಾ ಪುಸ್ತಕಗಳ ಬಗೆಗಿನ ಚರ್ಚೆಯನ್ನು ನಗಣ್ಯಗೊಳಿಸುತ್ತಿರುವ ನಮ್ಮಲ್ಲಿನ ಕೆಲವರು, ಈ ಮೇಲೆ ಚರ್ಚಿಸಲಾದ ೧೦ನೇ ತರಗತಿ ಸಮಾಜ ವಿಜ್ಞಾನ ಪುಸ್ತಕವನ್ನು ನಿಷ್ಠುರವಾಗಿ ಗಮನಿಸುವ ಅಗತ್ಯವಿದೆ. ಸಂಸದರು ಮತ್ತು ನಾಗರೀಕ ಹಕ್ಕುಗಳ ಹೋರಾಟಗಾರರು ಇದನ್ನು ಈ ಕೂಡಲೇ ಹಿಂತೆಗೆದುಕೊಳ್ಳುವಂತೆ ಆಗ್ರಹಿಸುವ ಅಗತ್ಯವಿದೆ. ಸಾಮಾನ್ಯ ಭಾರತೀಯರು ಗೌರವವಾಗಿ ಬಾಳುವ ಹಕ್ಕನ್ನು ಉಲ್ಲಂಘಿಸಿರುವ ಬಗ್ಗೆ ಈ ನೆಲದ ಕಾನೂನುಗಳು ಸ್ವಪ್ರೇರಿತವಾಗಿ ಅರಿತು, ರಾಜಾಸ್ಥಾನ ಮಾಧ್ಯಮಿಕ ಶಿಕ್ಷಣ ಮಂಡಳಿಯನ್ನು ಇದಕ್ಕೆ ಹೊಣೆಗಾರರನ್ನಾಗಿ ಮಾಡಬೇಕಿದೆ. ನಾವು ಈ ಪಠ್ಯಪುಸ್ತಕ ವಿವಾದದ ಆಯಾಸದಿಂದ ಬಳಲದೆ, ಇದರ ಬಗ್ಗೆ ಸಂವಾದವನ್ನು ಚಾಲ್ತಿಯಲ್ಲಿರಿಸೋಣ.

(ಅಪೂರ್ವಾನಂದರು ದೆಹಲಿ ವಿಶ್ವವಿದ್ಯಾಲಯದಲ್ಲಿ ಭೋಧಕರಾಗಿದ್ದಾರೆ.)

(೨೦೦೭ನೇ ಜನವರಿ ೨೦ರಂದು ತೆಹಲ್ಕಾದಲ್ಲಿ ಪ್ರಕಟಗೊಂಡ ಈ ಲೇಖನವನ್ನು ಸಾರ್ವಜನಿಕ ಹಿತಾಸಕ್ತಿಯ ಉದ್ದೇಶದಿಂದ ಮರುಪ್ರಚಾರಗೊಳಿಸಲಾಗಿದೆ.)